


ಒಂದು ಊರಿನಲ್ಲಿ ಒಬ್ಬ ಬಡ ರೈತನಿದ್ದನು. ಅವನಿಗೆ ಸ್ವಂತ ಜಮೀನು ಇರಲಿಲ್ಲ. ಬೇರೆ ರೈತರ ಜಮೀನಿನಲ್ಲಿ ದುಡಿದು ಅವರು ಕೊಟ್ಟ ಕಾಳು ಕಡ್ಡಿಯಿಂದ ತನ್ನ ಜೀವನವನ್ನು ಸಾಗಿಸುತ್ತಿದ್ದನು. ಅವನಿಗೆ ಇಬ್ಬರು ಗಂಡುಮಕ್ಕಳಿದ್ದರು. ಹಿರಿಯವನು ಜಾಣನು, ಕಪಟಿಯೂ, ಸ್ವಾರ್ಥಿಯೂ ಆಗಿದ್ದರೆ, ಕಿರಿಯನು ಮುಗ್ಧನು, ಉದಾರಿಯೂ ಪರೋಪಕಾರಿಯೂ ಆಗಿದ್ದನು. ರೈತನಿಗೆ ವಯಸ್ಸಾಯಿತು. ಒಂದು ದಿನ ಅವನು ಶಿವನ ಪಾದ ಸೇರಿದನು.

ರೈತನು ತನ್ನ ಮಕ್ಕಳಿಗೆ ಮನೆಯ ಅಂಗಳಲ್ಲಿರುವ ಒಂದು ತೆಂಗಿನ ಮರ, ಒಂದು ಹಸು ಮತ್ತು ಒಂದು ಕಂಬಳಿಯನ್ನು ಆಸ್ತಿಯಾಗಿ ಬಿಟ್ಟುಹೋಗಿದ್ದನು.

ತಂದೆ ಸತ್ತ ನಂತರ ಆಸ್ತಿಯನ್ನು ಪಾಲು ಮಾಡಿಕೊಳ್ಳೋಣ ಎಂದು ಅಣ್ಣ ಹೇಳಿದಾಗ ತಮ್ಮ ಅದಕ್ಕೆ ಒಪ್ಪಿಕೊಂಡನು. ಆದರೆ ತಾನು ಹಿರಿಯನಾದುದರಿಂದ ಆಸ್ತಿಯನ್ನು ತಾನೇ ಪಾಲು ಮಾಡುವುದಾಗಿ ಅಣ್ಣನು ಹೇಳಿದನು. ಅದಕ್ಕೂ ತಮ್ಮನು ಸಮ್ಮತಿಸಿದನು. ತನ್ನ ತಮ್ಮ ತುಂಬ ಮುಗ್ಧ ಸ್ವಭಾವದವನಾದುದರಿಂದ ಅವನನ್ನು ವಂಚಿಸಬೇಕೆಂಬ ಕೆಟ್ಟ ಆಲೋಚನೆ ಅಣ್ಣನಲ್ಲಿ ಹುಟ್ಟಿತು. ಅವನು ತನ್ನ ತಮ್ಮನನ್ನು ಕುರಿತು 'ಅಪ್ಪ ಬಿಟ್ಟುಹೋದ ಈ ಮೂರು ವಸ್ತುಗಳನ್ನು ಕತ್ತರಿಸಿ ಪಾಲು ಮಾಡಿಕೊಳ್ಳುವಂತಿಲ್ಲ. ಆದ್ದರಿಂದ ತೆಂಗಿನ ಮರದ ಕೆಳಭಾಗವನ್ನು ನೀನು ತೆಗೆದುಕೋ. ಮೇಲ್ಭಾಗವನ್ನು ನಾನು ತೆಗೆದುಕೊಳ್ಳುತ್ತೇನೆ. ಹಸುವಿನ ಮುಂಭಾಗವನ್ನು ನೀನು ತೆಗೆದುಕೋ. ಹಿಂಭಾಗವನ್ನು ನಾನು ತೆಗೆದುಕೊಳ್ಳುತ್ತೇನೆ. ಕಂಬಳಿಯನ್ನು ಹಗಲು ನೀನು ಇಟ್ಟುಕೋ. ರಾತ್ರಿ ನಾನು ಇಟ್ಟುಕೊಳ್ಳುತ್ತೇನೆ' ಎಂದು ಹೇಳಿದ.

ಅಣ್ಣನ ಕಪಟವನ್ನರಿಯದ ತಮ್ಮ ಅದಕ್ಕೂ ಸಮ್ಮತಿಸಿದ.

ಹಸುವಿನ ಮುಂಭಾಗ ತನ್ನದೆಂದು ತಮ್ಮ ಹಸುವಿಗೆ ಹಿಂಡಿ ಮೇವು ತಿನ್ನಿಸಿ ನೀರು ಕುಡಿಸಿ ಅದರ ಆರೈಕೆ ಮಾಡತೊಡಗಿದ. ಹಸುವಿನ ಹಿಂಭಾಗ ಅಣ್ಣನದ್ದಾಗಿದ್ದರಿಂದ ಹಸುವಿನ ಹಾಲನ್ನು ಅಣ್ಣ ಕರೆದುಕೊಳ್ಳತೊಡಗಿದ. ತೆಂಗಿನಮರದ ಕೆಳಭಾಗ ತನ್ನದೆಂದು ತಮ್ಮ ಅದಕ್ಕೆ ನೀರು ಮತ್ತು ಗೊಬ್ಬರ ಹಾಕಿದ. ಆದರೆ ಅಣ್ಣ ಮರಕ್ಕೆ ಬಿಟ್ಟ ಎಲ್ಲ ತೆಂಗಿನಕಾಯಿಗಳನ್ನು ತಾನೇ ಕುಯ್ದುಕೊಂಡ. ರಾತ್ರಿಯಾಗುತ್ತಲೇ ಅಣ್ಣ ತಮ್ಮನಿಂದ ಕಂಬಳಿಯನ್ನು ಪಡೆದು ಹೊದ್ದುಕೊಂಡು ಹಾಯಾಗಿ ಮಲಗಿದ. ತಮ್ಮ ಚಳಿಯಿಂದ ನಡಗುತ್ತ ಒಂದು ಮೂಲೆಯಲ್ಲಿ ಮುದುರಿಕೊಂಡ.

ತನ್ನ ಮುಗ್ಧತೆಯ ದುರುಪಯೋಗ ಪಡೆದುಕೊಂಡ ಅಣ್ಣ ತನ್ನನ್ನು ವಂಚಿಸಿದ ಬಗ್ಗೆ ತಮ್ಮನಿಗೆ ತುಂಬ ದುಃಖವಾಯಿತು.

ಒಂದು ದಿನ ಅವನು ಅದೇ ದುಃಖದಲ್ಲಿ ಮಲಗಿದ್ದಾಗ ಅವನ ತಂದೆ ಕನಸಿನಲ್ಲಿ ಕಾಣಿಸಿಕೊಂಡು ಅಣ್ಣನಿಗೆ ಹೇಗೆ ಬುದ್ಧಿ ಕಲಿಸಬೇಕೆಂಬ ಉಪಾಯವನ್ನು ಹೇಳಿದ.

ಮರುದಿನ ಅಣ್ಣ ತೆಂಗಿನಮರವನ್ನೇರಿ ತೆಂಗಿನಕಾಯಿಗಳನ್ನು ಕೀಳುತ್ತಿದ್ದಾಗ ತಮ್ಮ ಒಂದು ಕೊಡಲಿಯನ್ನು ತೆಗೆದುಕೊಂಡು ಮರದ ಬುಡವನ್ನು ಕಡಿಯತೊಡಗಿದ. ಪ್ರಾಣಭಯದಿಂದ ಅಣ್ಣ ತಮ್ಮನನ್ನು ಕುರಿತು 'ಫಲಕೊಡುವ ಮರವನ್ನು ಯಾರಾದರೂ ಕಡಿಯುತ್ತಾರೆಯೇ? ನಿನಗೇನು ಹುಚ್ಚುಗಿಚ್ಚು ಹಿಡಿದಿದೆಯೇ?' ಎಂದು ಕೇಳಿದ.

ಅದಕ್ಕೆ ತಮ್ಮನು 'ಮರದ ಕೆಳಭಾಗ ನನ್ನದು. ಅದಕ್ಕೆ ನಾನು ಏನು ಬೇಕಾದರೂ ಮಾಡುತ್ತೇನೆ. ಕೇಳಲು ನೀನಾರು?' ಎಂದು ಸವಾಲು ಹಾಕಿದ. ಮರ ಕಡಿಯಬೇಡ ಎಂದು ಅಣ್ಣ ಎಷ್ಟು ಗೋಗರೆದರೂ ತಮ್ಮ ಕೇಳಲಿಲ್ಲ. ತಾನು ಮೇಲಿನಿಂದ ಬಿದ್ದು ಸಾಯುವುದು ನಿಶ್ಚಿತ ಎನಿಸಿದಾಗ ಅಣ್ಣ ತಮ್ಮನನ್ನು ಕುರಿತು 'ಇಂದಿನಿಂದ ತೆಂಗಿನಕಾಯಿಗಳಲ್ಲಿ ನಿನಗೂ ಅರ್ಧಪಾಲು ಕೊಡುತ್ತೇನೆ. ಮರ ಕಡಿಯುವುದನ್ನು ನಿಲ್ಲಿಸು' ಎಂದು ಹೇಳಿದಾಗ ತಮ್ಮ ಮರ ಕಡಿಯುವುದನ್ನು ನಿಲ್ಲಿಸಿದ.

ಅಂದು ಸಂಜೆ ಅಣ್ಣ ಹಸುವಿನ ಹಾಲನ್ನು ಹಿಂಡಿಕೊಳ್ಳುತ್ತಿದ್ದಾಗ ತಮ್ಮ ಒಂದು ಕೋಲನ್ನು ತೆಗೆದುಕೊಂಡು ಹಸುವಿನ ಮುಂಭಾಗಕ್ಕೆ ಬಾರಿಸತೊಡಗಿದ. ಇದರಿಂದ ಕೋಪಗೊಂಡ ಹಸು ಅಣ್ಣನಿಗೆ ಝಾಡಿಸಿ ಒದೆಯಿತು. ಆಗ ಅಣ್ಣ 'ಹಸುವನ್ನೇಕೆ ಹೊಡೆಯುತ್ತಿರುವೆ?' ಎಂದು ಕೇಳಿದಾಗ 'ಹಸುವಿನ ಮುಂಭಾಗ ನನ್ನದು ಅದಕ್ಕೆ ನಾನು ಏನು ಬೇಕಾದರೂ ಮಾಡುತ್ತೇನೆ. ಕೇಳಲು ನೀನಾರು'? ಎಂದು ಹೇಳಿದ ತಮ್ಮ.

ತನ್ನ ಮೋಸದ ಅರಿವು ತಮ್ಮನಿಗಾಗಿದೆ ಎಂದು ತಿಳಿದ ಅಣ್ಣ 'ಹಸುವಿನ ಹಾಲಿನಲ್ಲಿ ಅರ್ಧಭಾಗವನ್ನು ನಿನಗೆ ಕೊಡುತ್ತೇನೆ. ಹೊಡೆಯುವುದನ್ನು ನಿಲ್ಲಿಸು, ಎಂದು ಹೇಳಿದಾಗ ತಮ್ಮ ಹಸುವಿಗೆ ಹೊಡೆಯುವುದನ್ನು ನಿಲ್ಲಿಸಿದ.

ಅಂದು ರಾತ್ರಿ ಅಣ್ಣ ಕಂಬಳಿಯನ್ನು ಕೇಳಿದಾಗ ತಮ್ಮ ಅದನ್ನು ಒದ್ದೆ ಮಾಡಿ ಕೊಟ್ಟ. ಅಂದು ತಮ್ಮನೊಂದಿಗೆ ಅಣ್ಣನು ಸಹ ಚಳಿಯಿಂದ ನಡುಗಿದ.

ತಮ್ಮ ಕೈಕೊಂಡ ಉಪಾಯಗಳಿಂದ ಅಣ್ಣನಿಗೆ ಬುದ್ಧಿ ಬಂತು. ಅಂದಿನಿಂದ ಇದ್ದುದರಲ್ಲಿ ಹಂಚಿಕೊಂಡು ಅಣ್ಣ ಮತ್ತು ತಮ್ಮ ಅನ್ಯೋನ್ಯವಾಗಿ ಇರತೊಡಗಿದರು. ( ಜಾನಪದ ಕತೆ)

**-ಮುರಲೀಧರ ಕುಲಕರ್ಣಿ, ಬೀದರ್**